## ಪ್ರಾರ್ಥನೆ

# ಶ್ರೀಸುಬ್ರಹ್ಮಣ್ಯಪಂಚರತ್ನಮ್



**ಷಡಾನನಂ ಚಂದನಲೇಪಿತಾಂಗಂ**
**ಮಹಾಮತಿಂ ದಿವ್ಯಮಯೂರವಾಹನಮ್ ।**
**ರುದ್ರಸ್ಯ ಸೂನುಂ ಸುರಲೋಕನಾಥಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೧ ॥**

ಆರು ಮುಖಗಳನ್ನು ಹೊಂದಿರುವ, ಶ್ರೀಗಂಧವನ್ನು ಲೇಪಿಸಿಕೊಂಡಿರುವ ದೇಹದಿಂದ ಶೋಭಿಸುವ, ಮಹಾಮತಿಯಾದ, ದಿವ್ಯವಾದ ನವಿಲನ್ನು ತನ್ನ ವಾಹನವನ್ನಾಗಿ ಮಾಡಿಕೊಂಡಿರುವ, ರುದ್ರನ ಮಗನಾದ ಹಾಗೂ ದೇವಲೋಕದ ನಾಯಕನಾದ ಶ್ರೀ ಸುಬ್ರಹ್ಮಣ್ಯದೇವನಲ್ಲಿ ಶರಣಾಗತನಾಗಿದ್ದೇನೆ.

**ಜಾಜ್ವಲ್ಯಮಾನಂ ಸುರಬೃಂದವಂದ್ಯಂ**
**ಕುಮಾರಧಾರಾತಟಮಂದಿರಸ್ಥಮ್ ।**
**ಕಂದರ್ಪರೂಪಂ ಕಮನೀಯಗಾತ್ರಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೨ ॥**

ಜಾಜ್ವಲ್ಯಮಾನನಾದ, ಸುರಗಣಗಳಿಂದ ವಂದಿಸಲ್ಪಡುವ, ಕುಮಾರಧಾರಾ ನದಿಯ ತಟದಲ್ಲಿರುವ (ಶ್ರೀ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರವೆಂಬ) ಮಂದಿರದಲ್ಲಿ ನೆಲೆಸಿರುವ, ಮನ್ಮಥನಂತೆ ಸುಂದರನಾದ, ಅಸಾಧಾರಣ ದೇಹವನ್ನು ಹೊಂದಿರುವ ಶ್ರೀಸುಬ್ರಹ್ಮಣ್ಯ ದೇವನಲ್ಲಿ ಶರಣಾಗತನಾಗಿದ್ದೇನೆ.

**ದ್ವಿಷಡ್ಭುಜಂ ದ್ವಾದಶದಿವ್ಯನೇತ್ರಂ**
**ತ್ರಯೀತನುಂ ಶೂಲಮಸಿಂ ದಧಾನಮ್ ।**
**ಶೇಷಾವತಾರಂ ಕಮನೀಯರೂಪಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೩ ॥**

ಹನ್ನೆರಡು ಭುಜಗಳಿಂದಲೂ, ದಿವ್ಯವಾದ ಹನ್ನೆರಡು ಕಣ್ಣುಗಳಿಂದ, ಮೂರು ದೇಹಗಳಿಂದ ಕೂಡಿದ, ಶೂಲ ಹಾಗೂ ಖಡ್ಗವನ್ನು ಧರಿಸಿದ, ಶೇಷಾವತಾರನಾದ, ಸುಂದರ ಆಕಾರವುಳ್ಳ ಶ್ರೀ ಸುಬ್ರಹ್ಮಣ್ಯ ದೇವನಲ್ಲಿ ಶರಣಾಗತನಾಗಿದ್ದೇನೆ.

**ಸುರಾರಿಘೋರಾಹವಶೋಭಮಾನಂ**
**ಸುರೋತ್ತಮಂ ಶಕ್ತಿಧರಂ ಕುಮಾರಮ್ ।**
**ಸುಧಾರಶಕ್ತ್ಯಾಯುಧಶೋಭಿಹಸ್ತಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೪ ॥**

ದೇವತೆಗಳ ವೈರಿಯಾದ ಅಸುರರೊಂದಿಗೆ ನಡೆದ ಘೋರ ಯುದ್ಧದಲ್ಲಿ ತನ್ನ ಶೌರ್ಯದಿಂದ ಶೋಭಿಸಿದ, ದೇವತೆಗಳಲ್ಲೆಲ್ಲ ಅತ್ಯುತ್ತಮನಾದ, ಶಕ್ತಿಯನ್ನೇ ತನ್ನಲ್ಲಿ ಧರಿಸಿರುವ, (ಪರಶಿವನ) ಕುಮಾರನಾದ, 'ಕುಮಾರ' ನೆಂದೇ ಜಗತ್ಪ್ರಸಿದ್ಧನಾದ, ಶಕ್ತ್ಯಾಯುಧವನ್ನು ಕೈಯಲ್ಲಿ ಹಿಡಿದು ಶೋಭಿಸುತ್ತಿರುವ ಶ್ರೀಸುಬ್ರಹ್ಮಣ್ಯ ದೇವನಲ್ಲಿ ಶರಣಾಗತನಾದ್ದೇನೆ.

**ಇಷ್ಟಾರ್ಥಸಿದ್ಧಿಪ್ರದಮೀಶಪುತ್ರಂ**
**ಮಿಷ್ಟಾನ್ನದಂ ಭೂಸುರಕಾಮಧೇನುಮ್ ।**
**ಗಂಗೋದ್ಭವಂ ಸರ್ವಜನಾನುಕೂಲಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೫ ॥**

ಇಷ್ಟಾರ್ಥಸಿದ್ಧಿಯನ್ನು ನೀಡುವ ಈಶ್ವರನ ಪುತ್ರನಾದ, ಸ್ವಾದಿಷ್ಟವಾದ ಅನ್ನವನ್ನು ನೀಡುವ, ಬ್ರಾಹ್ಮಣರಿಗೆ ಕಾಮಧೇನುವಿನಂತೆ ಬಯಸಿದ್ದನ್ನು ನೀಡುವ, ಗಂಗೋದ್ಭವನಾದ, ಸಕಲ ಜನರಿಗೂ ಅನುಕೂಲವನ್ನು ದಯಪಾಲಿಸುವ, ಶ್ರೀ ಸುಬ್ರಹ್ಮಣ್ಯ ದೇವನಲ್ಲಿ ಶರಣಾಗತನಾಗಿದ್ದೇನೆ.

## ಸೂಕ್ತಿಪ್ರಭ

# ಗುರುಮಹಿಮೆ

**ಕೇ**ವಲ ಸಚ್ಚಿದಾನಂದನೇ ಗುರು. ಮನುಷ್ಯನು ಗುರುವಿನ ಪಟ್ಟ ಧರಿಸಿ ಜನರಲ್ಲಿ ಆತ್ಮಜಾಗೃತಿಯನ್ನು ಉಂಟುಮಾಡಿದ್ದೇ ಆದರೆ, ಆಗ ತಿಳಿದುಕೊಳ್ಳಬೇಕು, ಸಚ್ಚಿದಾನಂದನೇ ಆ ರೂಪ ಧರಿಸಿದ್ದಾನೆ ಎಂಬುದಾಗಿ. ಗುರು ಒಬ್ಬ ಸ್ನೇಹಿತ ಇದ್ದ ಹಾಗೆ. ಆತ ಕೈಹಿಡಿದು ಕರೆದುಕೊಂಡು ಹೋಗುತ್ತಾನೆ. ಭಗವಂತನ ದರ್ಶನವಾದ ನಂತರ ಗುರು-ಶಿಷ್ಯರ ಭೇದವಿರದು.

— ಶ್ರೀರಾಮಕೃಷ್ಣರು

**ನಿ**ಜವಾದ ಗುರುವು ಕಣ್ಣಿನ ಪರೆಯನ್ನು ತೆಗೆದು ನಮ್ಮ ನಿಜಧಾಮದ ದರ್ಶನವನ್ನು ನೀಡುತ್ತಾನೆ. ಓ ನಾನಕ್, ದೇಹದಲ್ಲಿಯೇ ಭಗವದ್ಧಾಮವನ್ನು ತೋರಿಸುವವನೇ ನಿಜವಾದ ಗುರು.

— ಗುರುನಾನಕ್

**ಆ**ತ್ಮನು ಹಲವರಿಗೆ ಕೇಳುವುದಕ್ಕೂ ಸಿಗಲಾರನು. ಕೇಳಿದ ಮೇಲೆ ಅವನನ್ನು ಅರಿಯುವವರೂ ವಿರಳರೇ. ಆತ್ಮನ ವಿಚಾರವನ್ನು ಕಲಿಸುವ ಗುರು ಅತ್ಯದ್ಭುತನಾದವನು; ಅಂತೆಯೇ ಅದನ್ನು ತಿಳಿದುಕೊಳ್ಳುವ ಶಿಷ್ಯನೂ ಅತ್ಯದ್ಭುತ ಮೇಧಾವಿ — ಹೀಗಿದ್ದರೆ ಮಾತ್ರ ಆತ್ಮಜ್ಞಾನ ಸಾಧ್ಯವಾಗುವುದು.

— ಕಠೋಪನಿಷತ್

**ಉ**ರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ
ಆ ತೃಣವ ಕೆಂಡ ನುಂಗಿದಂತೆ
ಗುರುಚರಣದ ಮೇಲೆ ತನುತೃಣವನಿಳುಹಿದರೆ
ಆತನ ಸರ್ವಾಂಗವೆಲ್ಲಾ ಲಿಂಗ ಕಾಣಾ ರಾಮನಾಥ!

— ದೇವರ ದಾಸಿಮಯ್ಯ